ಅವರ ಬಳಿ ನಿಂತೆ. ನೀರಿನ ತೇವವನ್ನು ಸಂಪೂರ್ಣ ಕಳೆದುಕೊಂಡ ಎರಡು ಜತೆ ಕಣ್ಣುಗಳು ಪರಸ್ಪರ ನೋಡಲು ನಿರಾಕರಿಸಿದವು. ಆಘಾತದ ಆಕ್ರಾಂತಗಳು ನಿಶ್ಶಬ್ದವಾಗಿ ವಿನಿಮಯವಾದುವು. ಅಪ್ರಯತ್ನವಾಗಿ ಹಿಡಿದುಕೊಂಡ ಕೈಗಳಲ್ಲಿ ಅಸಹನೀಯ ನಡುಕವಿತ್ತು.

ಯಾವ ಸೈಕಾಲಜಿಸ್ಟರ ನೆರವೂ ಇಲ್ಲದೆ, ಕೌನ್ಸೆಲಿಂಗಿನ ಅನಿವಾರ್ಯವಿಲ್ಲದೆ ಹುಡುಗ ನನ್ನ ಸಮಕ್ಷಮ-ಸಮಾಗಮಗಳಲ್ಲಿ, ಸನ್ನಿಹಿತ ಸಮನ್ವಯಗಳಲ್ಲಿ ಸರಿದಾರಿಗೆ ಬರ್ತಾ ಇದ್ದ. ಸ್ವೀಕಾರದ ಸ್ವಕೀಯವಲ್ಲದೆ ನಾನು ಬೇರೇನೂ ಮಾಡಿರಲಿಲ್ಲ. ಮಾತಾಡಿರಲಿಲ್ಲ. 'ನೀನು ನನಗೆ ಬೇಕು. ನೀನಿಲ್ಲದೆ ನಾನಿಲ್ಲ' ಅನ್ನುವ ಭಾವದ ಸಮ್ಮೋಹಕ ಶಕ್ತಿಯೆ ಫಲಪ್ರದವೆನಿಸಿತ್ತು. ಪರಿವರ್ತನೆಯ ಕೀಲಿಕೈಯಾಗಿತ್ತು. ಕೀಟಲೆಗಳಲ್ಲಿ ಕಳೆದಿರುತ್ತಿದ್ದ ಓದಿನ ಚುರುಕು ಮತ್ತೆ ಮರುಕಳಿಸಿ ಕಾಣುತ್ತಿತ್ತು. ಪುಟ್ಟ ಮಗುವಿಗೆ ಕೊಡುತ್ತಿದ್ದ ತೊಂದರೆಗಳೆಲ್ಲ ಒಂದೊಂದಾಗಿ ಕಣ್ಮರೆಯಾಗತೊಡಗಿದವು. ಶಾಲೆಯ ಪಾಠದ ಹೊತ್ತು ಮತ್ತು ಮನೆಯಲ್ಲಿ ಮಲಗುವ ವೇಳೆಯನ್ನುಳಿದು ಸದಾಕಾಲ ನನ್ನ ಸಹವಾಸದಲ್ಲಿ ಸ್ವಂತ ವರ್ತುಲವೆಳೆದಿರುತ್ತಿದ್ದ. ಎಚ್ಚರದ ಒಂದೇ ಒಂದು ಕ್ಷಣವನ್ನೂ ನಿಶ್ಚಲ ನಿಲುವಿನಲ್ಲಿ ನಿಂತು ಕಳೆಯಲಾರದ ಚಟುವಟಿಕೆ. ಅವನ ದೈಹಿಕ ಕ್ರಿಯಾಶೀಲತೆ ಆ ವಯಸ್ಸಿಗೆ ಅದ್ವಿತೀಯ ಅನಿಸ್ತಿತ್ತು ನನಗೆ. ನಡಿಗೆ ಅನ್ನುವ ಪದ್ಧತಿಯೇಯಿಲ್ಲದೆ ಅದು ಯಾವಾಗಲೂ ಓಟವೇ ಆಗಿರುತ್ತಿತ್ತು. ಮನೆಯ ಎಲ್ಲ ಫರ್ನಿಚರ್ ಶೆಲ್ಫುಗಳ ಮೇಲೆ ಹತ್ತಿ ಹಾರುವ ಹವ್ಯಾಸ. ಹಿತ್ತಿಲ ಗಿಡಮರಗಳೆಲ್ಲಾ ತಮ್ಮ ಗಾತ್ರ - ಆಕಾರಗಳ ಪರಿವೆಯಿಲ್ಲದೆ ವಿನ್ಯಾಸನನ್ನು ಹತ್ತಿಸಿಕೊಂಡು ಸಂತೃಪ್ತಿಯಲ್ಲಿ ತೂಗುತ್ತಿದ್ದವು. ಅದೆಷ್ಟೋ ಬಾರಿ ಕಣ್ತಪ್ಪಿಸಿ ಕಾಣೆಯಾದ ಹುಡುಗನನ್ನರಸುತ್ತ ಅವನಮ್ಮ ಬಂದು 'ಸುನೀತಕ್ಕಾ' ಎಂದು ನನ್ನನ್ನು ಕರೆಯುತ್ತಿದ್ದರು. ಯಾವುದೊ ಮೂಲೆಯ ಮರದ ಮೇಲೆ 'ಸುನಿಯೇ...' ಎಂದು ಚೇಷ್ಟೆಯ ದನಿಯಲ್ಲಿ ಪತ್ತೆಯಾಗುತ್ತಿದ್ದ. ಕರೆದು ಬೈದು ಬೆದರಿಸಿದ ಮೇಲೆ ನೇರವಾಗಿ ಇಳಿಯದೆ ಕೊಂಬೆಯಿಂದ ಕೊಂಬೆ ಹಿಡಿದು ನೇತಾಡುತ್ತ ಕೆಳಗೆ ಹಾರುತ್ತಿದ್ದ. ಹೈ ಜಂಪ್, ಲಾಂಗ್ ಜಂಪ್ ಎಂದು ಆಗಾಗ ಪೆಟ್ಟಾಗುತ್ತಿದ್ದ ಕಾಲುಗಳನ್ನು ನಾನೇ ಗುಟ್ಟಾಗಿ ಎಣ್ಣೆ ಹಚ್ಚಿ ನೀವಿ, ಸವರಿ ಸರಿಪಡಿಸಿ ಚಂದ್ರನ್ನಣ್ಣನಿಂದ ಇನ್ನೂ ತಿನ್ನಬೇಕಾದ ಪೆಟ್ಟುಗಳಿಂದ ತಪ್ಪಿಸುತ್ತಿದ್ದೆ. ಸಾಯಂಕಾಲ ವಾಕಿಂಗ್ ಅಂತ ಮನೆ ಹಿಂದಿನ ಗುಡ್ಡದ ಮೇಲೆ ನಾನು, ಮಾಲಕ್ಕ ಮತ್ತು ಪಕ್ಕದ ಇನ್ನೂ ಒಂದಿಬ್ಬರು ಹೆಂಗಸರು ಬಂದಿರುತ್ತಿದ್ದರು. ಕೈಹಿಡಿದು ನಡೆಯುವ ಅವರ ಮಕ್ಕಳನ್ನು ಬಿಟ್ಟು ಬಂಡೆಯಿಂದ ಬಂಡೆಗೆ ಹಾರುವ ವಿನ್ಯಾಸನ ಮಂಡಿಗಳು ಯಾವತ್ತೂ ಜಜ್ಜಿದ ಗಾಯ, ಕಲೆಗಳಿಲ್ಲದೆ ಕಾಣುವಂತಿರಲಿಲ್ಲ. ಹಸಿ ಗಾಯ ಒಣಗಿ ಮಾಸುವವರೆಗೂ ಮದ್ದು ಹಚ್ಚಿ ಪಟ್ಟಿ ಕಟ್ಟುತ್ತಿದ್ದೆ. ನನ್ನ ಮನೆಯಲ್ಲೆ ನೆಲಸಿದ ಫಸ್ಟ್‌ಏಯಿಡ್ ಬಾಕ್ಸು ಡೇ - ನೈಟ್ ಅಂತ ಡ್ಯೂಟಿಯಲ್ಲಿರಬೇಕಿತ್ತು. ನಮ್ಮ ಸ್ಕೂಲಿನ ಫಿಸಿಕಲ್ ಟ್ರೈನರ್ ಸದಾನಂದ ಮಾಸ್ಟ್ರಲ್ಲಿ ಮಾತಾಡಿದೆ. ವಿನ್ಯಾಸನ ಸ್ಪೋರ್ಟ್ಸ್, ಗೇಮ್ಸ್‌ನ ಸಕಲ ವಹಿವಾಟುಗಳನ್ನೂ ಸಂತೋಷವಾಗಿ ಸ್ವೀಕರಿಸಿದರು. ತೀರ ಸಂತೃಪ್ತಿಯಿಂದ ಇವನನ್ನು ನಿಭಾಯಿಸಿದ್ದರು.

ಹಾಲಲ್ಲಿ ತಂದು ಮಲಗಿಸಿದ್ದರು. ಒಡೆದ ತೆಂಗಿನ ಒಡಲುಗಳಲ್ಲಿ ಉರಿಸಿಟ್ಟ ದೀಪಗಳು ಧಗಧಗನೆ ಉರಿಯುತ್ತಿದ್ದವು. ಹೆತ್ತೊಡಲ ಎದೆಗಳು ಬಿರಿಯುತ್ತಿದ್ದುವು. ಮತ್ತೆ... ನಾನು? ನನಗೇನಿದೆ? ಅಳಿದ ಮೇಲೆ ಉಳಿದ ಬದುಕಿಗೆ ಶೂನ್ಯವೇ ಮೂಲಮಂತ್ರವೆ? ಎಲ್ಲ ಬ್ಯಾಂಡೇಜುಗಳನ್ನು ಸುತ್ತಿದ ಬಿಳಿಬಟ್ಟೆ ಮುಚ್ಚಿಟ್ಟಿತ್ತು. ನಿರಂತರ ಚಲನೆಗಳಲ್ಲಿ ಚುರುಕಿನ ಗರಿಗಳಂತಿದ್ದ ಕೈಕಾಲುಗಳು ಮುಂದೆಂದೂ ಬಿಡಿಸದಂತೆ ಮೈಯ್ಯೊಂದಿಗೆ ಬಿಗಿದು ನಿಶ್ಚಲವಾಗಿದ್ದುವು. ಇಪ್ಪತ್ತರಲ್ಲೂ ಹದಿನೈದರ ಎಳಸಿನಲ್ಲಿ ಸೆಳೆದು ಕಂಗೊಳಿಸಿತ್ತಿದ್ದ ಆ ಮುದ್ದು ಮುಖ - ಇನ್ನೂ ಹಾಗೇ ಇದೆ. ಯಾವ ಸೂಚನೆಯೂ ಇಲ್ಲದೆ ಎಳೆದೊಯ್ದು ಮರಣದ ಛಾಯೆ ಮುಖದ ಮೇಲೆ ಏನೇನೂ ಕಾಣಿಸ್ತಿಲ್ಲ. ನಾನೊಮ್ಮೆ ಎಂದಿನಂತೆ "ವಿನೂ..." ಎಂದು ಕರೆದರೆ ಖಂಡಿತವಾಗಿ ಎದ್ದು ಬರ್ತಾನೆ. "ಯಾಕೆ ಬರಬಾರದು?" ಅಂತನಿಸಿತು. ನಿರ್ಮಲ ಕಾಂತಿಯ ಆ ಮುಖಮುದ್ರೆಗೆ, ಅಂತಿಮ ಶಾಂತಿಯ ಅನಂತ ಪ್ರಾಪ್ತಿಯ ಆ ಹಣೆಗೊಮ್ಮೆ ತುಟಿಯೊತ್ತಿ ಅಲ್ಲೇ ಕುಸಿದು ಕುಳಿತೆ. ಈ ಸಾವಿನ ಸಂದೇಶ ಈ ಹಣೆಯ ಮೇಲೆ ಹುಟ್ಟಿದಾಗಲೆ ಬರೆದಿತ್ತೆ?

ಸುದೀರ್ಘವೆನಿಸಿದ ಅಸಹನೀಯ ರಾತ್ರಿ - ಮೆಲ್ಲನೇ ತೆವಳುತ್ತ ಸರಿಯುತ್ತಿತ್ತು. ಅಗಣಿತವಾಗಿ ಕಾಲುಗಳು